CLICK HERE TO DOWNLOAD ANNEXURE FOR THIS ANSWER

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 153 |
| ಸದಸ್ಯರ ಹೆಸರು | : | ಶ್ರೀ ಟಿ.ಎ.ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 28.01.2026 |
| ಉತ್ತರಿಸುವ ಸಚಿವರು | : | ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ವಕ್ಫ್‌ಗೆ ಸೇರಿದ ಆಸ್ತಿ ಪಾಸ್ತಿ ಕಬಳಿಕೆ ಆಗಿರುವ ಬಗ್ಗೆ, ಹಾಗೂ ಆಸ್ತಿ ವಿಚಾರ, ಕಬಳಿಕೆ ಆರೋಪಕ್ಕೆ ಗುರಿಯಾಗಿರುವವರ ಹೆಸರು ಸಹಿತ ವಿವರ ನೀಡುವುದು; | ರಾಜ್ಯದಲ್ಲಿ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ವಕ್ಫ್ ಆಸ್ತಿಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಪ್ರಕರಣಗಳನ್ವಯ ಒಟ್ಟು 2678 ಆಸ್ತಿಗಳು ಕಬಳಿಕೆ/ ಅಕ್ರಮ ಪರಭಾರೆ / ಒತ್ತುವರಿಯಾಗಿರುವುದು ಕಂಡು ಬಂದಿದೆ.<br>1. ಭೂ ಕಬಳಿಕೆ ನ್ಯಾಯಾಲಯದಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ: 25<br>2. ವಕ್ಫ್ ಕಾಯಿದೆ ಸೆಕ್ಷನ್ 52 ರಡಿ ದಾಖಲಾದ ಅಕ್ರಮ ಪರಭಾರೆಯಾದ ವಕ್ಫ್ ಆಸ್ತಿಗಳ ಸಂಖ್ಯೆ : 322<br>3. ವಕ್ಫ್ ಕಾಯಿದೆ ಸೆಕ್ಷನ್ 54 ರಡಿ ದಾಖಲಾದ ಒತ್ತುವರಿಯಾದ ವಕ್ಫ್ ಆಸ್ತಿಗಳ ಸಂಖ್ಯೆ : 2331<br><br>ಮುಂದುವರೆದು, ಕರ್ನಾಟಕ ರಾಜ್ಯ ವಕ್ಫ್ ಮಂಡಳಿಗೆ ಸೇರಿದ ಆಸ್ತಿ ಕಬಳಿಕೆ ಆರೋಪಕ್ಕೆ ಗುರಿಯಾಗಿರುವವರ ಹೆಸರಿನ ವಿವರ ಸಿ.ಡಿ.ಯಲ್ಲಿ ನೀಡಲಾಗಿದೆ. |
| ಆ) | ಈ ಆಸ್ತಿಯನ್ನು ಮರಳಿ ವಕ್ಫ್ ವಶಕ್ಕೆ ಪಡೆಯಲು ಕೈಗೊಂಡಿರುವ ಕ್ರಮಗಳೇನು; (ಮಾಹಿತಿ ಒದಗಿಸುವುದು); | ಕಬಳಿಕೆ/ಅಕ್ರಮ ಪರಭಾರೆ/ ಒತ್ತುವರಿಯಾದ ವಕ್ಫ್ ಆಸ್ತಿಯನ್ನು ಮರಳಿ ವಶಕ್ಕೆ ಪಡೆಯಲು ಈ ಕೆಳಕಂಡಂತೆ ವಿವಿಧ ನ್ಯಾಯಾಲಯಗಳಲ್ಲಿ ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ. ಸದರಿ ಪ್ರಕರಣಗಳು ವಿಚಾರಣೆ ಹಂತದಲ್ಲಿರುತ್ತವೆ.<br>1. ಭೂಕಬಳಿಕೆ ನ್ಯಾಯಾಲಯ - 25<br>2. ವಕ್ಫ್ ಕಾಯಿದೆ ಸೆಕ್ಷನ್ 52 ರಡಿ -322<br>3. ವಕ್ಫ್ ಕಾಯಿದೆ ಸೆಕ್ಷನ್ 54 ರಡಿ -2331 |

| | | |
|---|---|---|
| ಇ) | ರಾಜ್ಯದ ಎಷ್ಟು ಮಂದಿ ರೈತರಿಗೂ ಹಾಗೂ ವಕ್ಫ್ ಮಂಡಳಿಗೂ ಭೂಮಿ ವ್ಯಾಜ್ಯ ಇದೆ ? (ವಿಚಾರಣೆ ಪ್ರಕರಣದ ಸಂಖ್ಯೆ, ಆಸ್ತಿ ಪಾಸ್ತಿ ವಿವರ ಸಹಿತ ಸಂಪೂರ್ಣ ಮಾಹಿತಿ ನೀಡುವುದು); | ರಾಜ್ಯದ ವಕ್ಫ್ ಆಸ್ತಿಗೆ ಸಂಬಂಧಿಸಿದಂತೆ ರೈತರ ವಿರುದ್ಧ ಪ್ರತ್ಯೇಕವಾಗಿ ಯಾವುದೇ ಪ್ರಕರಣಗಳು ಇರುವುದಿಲ್ಲ.<br>ಹಲವಾರು ಪ್ರಕರಣಗಳಲ್ಲಿ ವಕ್ಫ್ ಆಸ್ತಿಯೆಂದು ಅಧಿಸೂಚಿತವಾಗಿರುವ ಮತ್ತು ನೋಂದಾಣಿಯಾಗಿರುವ ವಕ್ಫ್ ಆಸ್ತಿಗಳಲ್ಲಿ ಅನಧಿಕೃತವಾಗಿ ಒತ್ತುವರಿ ಮಾಡಿಕೊಂಡಿರುವಂತಹ ವ್ಯಕ್ತಿಗಳ ವಿರುದ್ಧ ವಿವಿಧ ನ್ಯಾಯಾಲಯಗಳಲ್ಲಿ 3913 ಪ್ರಕರಣಗಳು ದಾಖಲಾಗಿದ್ದು, ವಿಚಾರಣೆ ಹಂತದಲ್ಲಿರುತ್ತವೆ. ವಿವರಗಳನ್ನು ಸಿ.ಡಿ.ಯಲ್ಲಿ ನೀಡಲಾಗಿದೆ. |

**ಸಂಖ್ಯೆ: MWD-LMQ/8/2026**

(ಬಿ.ಜೆಡ್.ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು